ಶ್ರೀಮತಿ ನಫೀಸ್ ಫಜಲ್ (ವೈದ್ಯಕೀಯ ಶಿಕ್ಷಣ ಸಚಿವರು) :—

ಅ) ಕರ್ನಾಟಕ ಮುಖ್ಯ ಮಂತ್ರಿಗಳ ವೈದ್ಯಕೀಯ ಪರಿಹಾರ ನಿಧಿಯ ಸಂಸ್ಥೆಯು ಸರ್ಕಾರದ ಆದೇಶ ಸಂಖ್ಯೆ: ಆಕುಕ ೯೮ ಎಂಎಸ್‌ಎಫ್ ೨೦೦೦, ದಿನಾಂಕ: ೩೦.೩.೨೦೦೦ರ ಪ್ರಕಾರ ರೋಗಿಯ ವಾರ್ಷಿಕ ವರಮಾನ ರೂ. ೨೦,೦೦೦ ಗಳಿದ್ದು, ಇವರು ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದ ಪರುಶಿಷ್ಟ ಜಾತಿ ಪಂಗಡ ಹಾಗೂ ಅತಿ ಭೂರಹಿತ ಕಡು ಬಡವರಾಗಿದ್ದು. ರೋಗಿಗಳು ಅವರ ವಾರ್ಷಿಕ ವರಮಾನದ ದೃಢೀಕರಣದ ಪ್ರಮಾಣ ಪತ್ರವನ್ನು ತಹಸೀಲ್ದಾರರಿಂದ ಪಡೆದು ಹಾಗೂ ಹಸಿರು ಕಾರ್ಡು ಹೊಂದಿರುವ ರೋಗಿಗಳು ಅವರ ಕಾಯಿಲೆಯ ತೀಕ್ಷ್ಣತೆಯ ಆಧಾರದ ಮೇಲೆ ಸ್ವಾಯತ್ತೆಯ ಸಂಸ್ಥೆಗಳಿಗೆ ಮತ್ತು ಬೋಧಕ ಆಸ್ಪತ್ರೆಗಳಿಗೆ ಪರಿಹಾರವನ್ನು ನೀಡಿರುತ್ತದೆ. ಹಾಗೂ ಸರ್ಕಾರದ ಆದೇಶ ಸಂಖ್ಯೆ: ಆಕುಕ ೯೮ ಎಂಎಂಇ ೯೫ ದಿನಾಂಕ: ೧೮.೫.೯೫ರ ಅನ್ವಯ ಸ್ವಾಯತ್ತೆಯ ಸಂಸ್ಥೆಗಳಿಗೆ ಮತ್ತು ಬೋಧಕ ಆಸ್ಪತ್ರೆಗಳಿಗೆ ಸದಸ್ಯತ್ವ ಕಮಿಟಿಯಿಂದ ಪ್ರತಿ ರೋಗಿಯ ತೀಕ್ಷ್ಣತೆಯ ಕಾಯಿಲೆಯ ಆಧಾರದ ಮೇಲೆ ೨೫,೦೦೦ ಗಳನ್ನು ಮಂಜೂರು ಮಾಡಲು ಅಧಿಕಾರನವನ್ನು ಕೊಟ್ಟಿರುತ್ತದೆ. ಹಾಗೂ ಜಿಲ್ಲಾ ಆಸ್ಪತ್ರೆಯಲ್ಲಿಯೂ ರೋಗಿಗಳು ಇದರ ಸೌಲಭ್ಯಗಳನ್ನು ಪಡೆದುಕೊಳ್ಳಲು ಜಿಲ್ಲಾ ಶಸ್ತ್ರ ಚಿಕಿತ್ಸಕರು ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ಇವರ ಹೆಸರಿನಲ್ಲಿ ಜಂಟಿಯಾಗಿ ಪರಿಹಾರವನ್ನು ಕೊಡಲಾಗಿದ್ದು ರೋಗಿಗಳು ಜಿಲ್ಲಾ ಮಟ್ಟದಲ್ಲಿಯೂ ಇದರ ಸೌಲಭ್ಯಗಳನ್ನು ಪಡೆಯಲಾಗುತ್ತಿದ್ದು ಖಾಸಗಿ ಸಂಸ್ಥೆಯ ಆಸ್ಪತ್ರೆಗಳಲ್ಲಿ ಚಿಕಿತ್ಸೆಯನ್ನು ಪಡೆದುಕೊಳ್ಳಲು ಉದರ ಸೌಲಭ್ಯವು ಉದ್ಭವಿಸುವುದಿಲ್ಲ.

ಆ) ಮುಖ್ಯ ಮಂತ್ರಿಗಳ ವೈದ್ಯಕೀಯ ಪರಿಹಾರ ನಿಧಿ ಸಂಸ್ಥೆಯಿಂದ ಬೋಧಕ ಆಸ್ಪತ್ರೆಗಳಿಗೂ ಪರಿಹಾರವನ್ನು ನೀಡಲಾಗುತ್ತಿದ್ದು, ಜಿಲ್ಲಾ ಶಸ್ತ್ರ ಚಿಕಿತ್ಸಕರು, ಜಿಲ್ಲಾ ಮಟ್ಟದ ಸದಸ್ಯತ್ವ ಕಮಿಟಿಯಲ್ಲಿ ಸದಸ್ಯ ಕಾರ್ಯದರ್ಶಿಗಳಾಗಿದ್ದು ಇದರ ಸೌಲಭ್ಯವು ಖಾಸಗೀ ಆಸ್ಪತ್ರೆಗಳಿಗೆ ಕೊಡಲು ಉದ್ಭವವಾಗುವುದಿಲ್ಲ.

ಈ) ಈ ವಿಷಯವು ಕರ್ನಾಟಕ ಮುಖ್ಯ ಮಂತ್ರಿಗಳ ವೈದ್ಯಕೀಯ ಪರಿಹಾರ ಮಂಡಳಿಗೆ ಸಂಬಂಧಪಟ್ಟಿರುವುದರಿಂದ ಈ ಸೌಲಭ್ಯವು ಉದ್ಭವಿಸುವುದಿಲ್ಲ.

ರಾಷ್ಟ್ರ ವಲಯ ಹಾಗೂ ಕೇಂದ್ರ ವಲಯ ಕಾರ್ಯಕ್ರಮಗಳಿಗೆ ಹಣ ಬಿಡುಗಡೆ ಮಾಡುವುದು

2634 (3342) ಶ್ರೀ ಯಾವಗಲ್ ಬಿ.ಆರ್. (ನರಗುಂದ) :— ಮಾನ್ಯ ಯೋಜನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯ ವಲಯ ಹಾಗೂ ಕೇಂದ್ರ ವಲಯ ಕಾರ್ಯಕ್ರಮಗಳಿಗೆ ಹಣ ನೀಡುವಾಗ ತಾಲ್ಲೂಕುಗಳಿಗೆ ಯಾವ ಅಂಶವನ್ನು ಆಧರಿಸಿ ಹಣ ನೀಡಲಾಗುವುದು;

ಆ) ಗದಗ ಜಿಲ್ಲೆ ನರಗುಂದ ತಾಲ್ಲೂಕಿಗೆ ಹಣ ನಿಗಧಿಪಡಿಸುವಾಗ ಜನ ಸಂಖ್ಯೆ ಆಧಾರದ ಮೇಲೆ ನೀಡಲಾಗಿದೆಯೇ?

ಇ) ಜಿಲ್ಲೆಯ ಇತರ ತಾಲ್ಲೂಕುಗಳಿಗೆ ಹೋಲಿಸಿದಾಗ ನರಗುಂದ ತಾಲ್ಲೂಕಿಗೆ ನೀಡಲಾಗಿರುವ ಹಣದಲ್ಲಿ ತಾರತಮ್ಯ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಕಳೆದ 3 ವರ್ಷದ ವಿವರ ನೀಡುವುದು.

ಶ್ರೀಮತಿ ಸುಮಾ ವಸಂತ್ (ಯೋಜನಾ ರಾಜ್ಯ ಸಚಿವರು) :—

ಅ) ರಾಜ್ಯ ಯೋಜನೆಗಳಿಗೆ ಸಂಬಂಧಿಸಿದಂತೆ ಹಣವನ್ನು ರಾಜ್ಯ ಮಟ್ಟದ ಇಲಾಖಾ ಮುಖ್ಯಸ್ಥರುಗಳಾದ ಜಿಲ್ಲಾ ಮಟ್ಟದಲ್ಲಿನ ಸಂಬಂಧಿಸಿದ ಅಧಿಕಾರಿಗಳ ಮೂಲಕ ತಾಲ್ಲೂಕುಗಳಿಗೆ ಇಲಾಖಾ ಮಾರ್ಗಸೂಚಿ ಮತ್ತು ಕಮಿಟೆಡ್ ವೆಚ್ಚಗಳಿಗನುಗುಣವಾಗಿ ವಿತರಿಸಲಾಗುತ್ತಿದೆ.

ಜಿಲ್ಲಾ ವಲಯ ಯೋಜನೆಗಳಿಗೆ ಸಂಬಂಧಿಸಿದಂತೆ ತಾಲ್ಲೂಕುಗಳಿಗೆ ಹಣವನ್ನು ವಿತರಿಸಲು ಸರ್ಕಾರವು ಸೂತ್ರವೊಂದನ್ನು ನಿಗಧಿಪಡಿಸಿದೆ. ಈ ಸೂತ್ರದಲ್ಲಿ ಅಭಿವೃದ್ಧಿಗೆ ಸಂಬಂಧಿಸಿದ 6 ಸೂಚಕಗಳನ್ನು ಆಳವಡಿಸಿ ಅವುಗಳಿಗೆ ನೀಡಿದ weightage ಗಳು ಈ ರೀತಿ ಇವೆ. ಜನಸಂಖ್ಯೆ (50%) ಭೌಗೋಳಿಕ ವಿಸ್ತೀರ್ಣ (10%) ಸಾಕ್ಷರತೆ ((10%) ಒಣ ಭೂಮೀ ಪ್ರದೇಶ (10%) ಪ.ಜಾ. ಮತ್ತು ಪ.ವ. ಜನಸಂಖ್ಯೆಯ ಅನುಪಾತ (10%) ಮತ್ತು ಕೃಷಿ ಕಾರ್ಮಿಕರು (10%) ಈ ಸೂತ್ರದ ಮೂಲಕ ಹಣವನ್ನು ವಿತರಿಸಿದಾಗ ಬಹುತೇಕ ತಾಲ್ಲೂಕುಗಳಿಗೆ ಅಗತ್ಯಕ್ಕಿಂತ ಹೆಚ್ಚು ಹಾಗೂ ಕೆಲವು ತಾಲ್ಲೂಕುಗಳಿಗೆ ಕಡಿಮೆ ಹಣವು ಲಭ್ಯವಾದ ನಿಮಿತ್ತ ತಾಲ್ಲೂಕು ಪಂಚಾಯತ್ ಯೋಜನೆಗಳನ್ನು ಸ್ಥಳೀಯ ಬೇಡಿಕೆ ಹಾಗೂ ಇಲಾಖಾ ಮಾರ್ಗಸೂಚಿಯನ್ನು ಆಧರಿಸಿ ಅನುಷ್ಠಾನಗೊಳಿಸಲು ಸೂಚಿಸಿದೆ. ಈ ಸೂತ್ರದ ಬದಲಾಗಿ ತಾಲ್ಲೂಕುಗಳಿಗೆ ಹಣದ ವಿತರಣೆಯಲ್ಲಿ ಹಣದ ಅಭಾವವಿರುವುದರಿಂದ ಪರ್ಯಾಯ ಸೂತ್ರವು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಇಲ್ಲ, ಸ್ಥಳೀಯ ಬೇಡಿಕೆಗಳು, ಕಮಿಟೆಡ್ ವೆಚ್ಚ ಮತ್ತು ಇಲಾಖಾ ಮಾರ್ಗಸೂಚಿಗಳನ್ನು ಆಧರಿಸಿ ನರಗುಂದ ತಾಲ್ಲೂಕಿಗೆ ಹಣವನ್ನು ವಿತರಿಸಲಾಗುತ್ತಿದೆ.

ಇ) ಇಲ್ಲ

ಗದಗ ಜಿಲ್ಲೆಯ ಇತರ ತಾಲ್ಲೂಕುಗಳಾದ ಗದಗ (34%) ಮುಂಡರಗಿ (12%) ರೋಣ (26%) ಮತ್ತು ಶಿರಹಟ್ಟಿ (18%) ಗಳಿಗೆ ಹೋಲಿಸಿದಾಗ ಪ್ರತಿಶತ 10 ರಷ್ಟು ಜನ ಸಂಖ್ಯೆಯನ್ನು ಹೊಂದಿರುವ ನರಗುಂದ ತಾಲ್ಲೂಕು ಅತಿ ಸಣ್ಣ ತಾಲ್ಲೂಕು ಆಗಿರುತ್ತದೆ. ಇದೇ ರೀತಿ ಜಿಲ್ಲೆಯ ಪ್ರತಿಶತ 9 ರಷ್ಟು ಭೌಗೋಳಿಕ ವಿಸ್ತೀರ್ಣವನ್ನು ಹೊಂದಿರುವ ನರಗುಂದ ತಾಲ್ಲೂಕು ಇತರ ತಾಲ್ಲೂಕುಗಳಾದ ಗದಗ (24%) ಮುಂಡರಗಿ (19%) ರೋಣ (28%) ಮತ್ತು ಶಿರಹಟ್ಟಿ (20%) ಗಳಿಗಿಂತ ಕಡಿಮೆ ಭೌಗೋಳಿಕ ಪ್ರದೇಶವನ್ನು ಹೊಂದಿರುತ್ತದೆ. ಮೇಲಾಗಿ ಜಿಲ್ಲೆಯು ಇತರ ತಾಲ್ಲೂಕುಗಳಿಗಿಂತ ನೀರಾವರಿಯಾದ ನಿವ್ವಳ ವಿಸ್ತೀರ್ಣವು ನರಗುಂದ ತಾಲ್ಲೂಕಿನಲ್ಲಿ ಅತಿ ಹೆಚ್ಚಾಗಿದ್ದು ಬಯಲು ಸೀಮೆ ಅಭಿವೃದ್ಧಿ ಕಾರ್ಯಕ್ರಮ ಮತ್ತು ರೇಷ್ಮೆ ಅಭಿವೃದ್ಧಿ ಕಾರ್ಯಕ್ರಮಗಳಿಂದ ಆವೃತವಾಗಿರುವುದಿಲ್ಲ. ಆದುದರಿಂದ ನರಗುಂದ ತಾಲ್ಲೂಕಿಗೆ ಲಭ್ಯವಾಗುವ ಅನುದಾನದ ಪ್ರಮಾಣವು ಇತರ ತಾಲ್ಲೂಕುಗಳಿಗಿಂತ ಕಡಿಮೆ ಇರುತ್ತದೆ.

ಗದಗ ಜಿಲ್ಲೆಗೆ ಕಳೆದ ಮೂರು ವರ್ಷಗಳಲ್ಲಿ ತಾಲ್ಲೂಕುವಾರು ನಿಗಧಿಪಡಿಸಿರುವ ಹಣದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

1999-2000 ರಿಂದ 2001-02 ವರೆಗೆ ಗದಗ ಜಿಲ್ಲೆಯ ವಿವಿಧ ತಾಲ್ಲೂಕುಗಳಿಗೆ ವಿತರಿಸಿದ ಹಣದ ವಿವರ

ಲಕ್ಷ ರೂ.ಗಳಲ್ಲಿ

	ತಾಲ್ಲೂಕು	1999-2000	2000-2001	2001-2002
1.	ಗದಗ	840.66	972.80	975.64
2.	ಮುಂಡರಗಿ	470.50	506.21	543.32
3.	ನರಗುಂದ	305.80	330.38	359.12
4.	ರೋಣ	689.66	809.99	867.70
5.	ಶಿರಹಟ್ಟಿ	553.86	629.40	663.14

ಸೂಚನೆ: ಅನುದಾನವು ರಾಜ್ಯ ಹಾಗೂ ಕೇಂದ್ರದ ಪಾಲುಗಳನ್ನೊಳಗೊಂಡಿರುತ್ತದೆ.

F-35-II

F-35-II